ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ,
ಚಿಕ್ಕಮಗಳೂರು.

**<u>ಸಿ.ಸಿ. ನಂ.1245/2021</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಮಹಮದ್ ಸಲೀಂ ಅಬ್ಬಾಸ್ | ಪಿ.ಡಬ್ಲ್ಯೂ.1 |
| ಗಂಡನ ಹೆಸರು | ಃ | ಅಬ್ಬಾಸ್.ಎಂ.ಪಿ. | ಸಿ. ಡಬ್ಲ್ಯೂ.1 |
| ವಯಸ್ಸು | ಃ | 43 ವರ್ಷ | |
| ವೃತ್ತಿ | ಃ | ಪಿ.ಐ., ಐಎಸ್.ಡಿ. | |
| ವಾಸ | ಃ | ಚಿಕ್ಕಮಗಳೂರು | |

**<u>ದಿನಾಂಕಃ 19-08-2023 ರಂದು ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-</u>**

ನಾನು ಜುಲೈ-2019 ರಿಂದ ಆಗಸ್ಟ್ -2020 ರವರೆಗೆ ನಗರ ವೃತ್ತದಲ್ಲಿ ಸಿಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ16-09-2019 ರಂದು ಮಧ್ಯಾಹ್ನ 3-00 ಗಂಟೆಗೆ ನಾನು ಕಛೇರಿಯಲ್ಲಿರುವಾಗ ಚಿಕ್ಕಮಗಳೂರಿನ ಎಐಟಿ ಕಾಲೇಜಿನ ಬಾಯ್ಸ್ ಹಾಸ್ಟೆಲ್ ಮುಂಭಾಗದ ರಸ್ತೆಯಲ್ಲಿ ಯಾರೋ ವ್ಯಕ್ತಿಗಳು ಟಾಟಾ ಇಂಡಿಕಾ ಕಾರಿನಲ್ಲಿ ಬಂದು ವಿದ್ಯಾರ್ಥಿಗಳಿಗೆ ಅಕ್ರಮವಾಗಿ ಗಾಂಜಾ ಮಾರಾಟ ಮಾಡಲು ತೆಗೆದುಕೊಂಡು ಬರುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ, ಕೂಡಲೇ ಧಾಳಿ ನಡೆಸುವ ಸಂಬಂಧ ಎಸ್.ಪಿ.ಯವರಿಗೆ ಮನವಿ ಸಲ್ಲಿಸಿ, ಅವರಿಂದ ವಾರೆಂಟ್ ಪಡೆದುಕೊಂಡಿರುತ್ತೇನೆ. ಶೋಧನಾ ವಾರೆಂಟನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ಧಾಳಿ ನಡೆಸುವ ಸಂಬಂಧ ಒಬ್ಬರು ಗೆಜೆಟೆಡ್ ಆಫೀಸರ್ ಮತ್ತು ಇಬ್ಬರು ಪಂಚ ಸಾಕ್ಷಿದಾರರನ್ನು ಕಳಿಸುವಂತೆ ಐಡಿಎಸ್.ಜಿ. ಸರ್ಕಾರಿ ಕಾಲೇಜಿನ ಪ್ರಾಂಶುಪಾಲರಿಗೆ ಕೋರಿಕೊಂಡಿರುತ್ತೇನೆ. ಸಂಜೆ 4-00 ಗಂಟೆಗೆ ಐಡಿಎಸ್.ಜಿ. ಸರ್ಕಾರಿ ಕಾಲೇಜಿನ ಪ್ರಾಂಶುಪಾಲರು ಮತ್ತು ಉಪಪ್ರಾಂಶುಪಾಲರು ಮತ್ತು ಗೆಜೆಟೆಡ್ ಅಧಿಕಾರಿಗಳಾದ ನಾಗರಾಜುರವರು, ಹಾಗೂ ಪಂಚರಾಗಿ ಗಣೇಶ್ ಮತ್ತು ನಂಜೇಗೌಡರವರು ಠಾಣೆಗೆ

ಹಾಜರಾಗಿರುತ್ತಾರೆ. ಇವರಿಗೆ ಮಾಹಿತಿಯನ್ನು ತಿಳಿಸಿ, ಪಂಚರಾಗಿ ಮತ್ತು ಗೆಜೆಟೆಡ್ ಅಧಿಕಾರಿಗಳಾಗಿ ಧಾಳಿಗೆ ಸಹಕರಿಸುವಂತೆ ಕೋರಿಕೊಂಡಿದ್ದು ಅವರು ಒಪ್ಪಿರುತ್ತಾರೆ. ಇವರುಗಳಿಗೆ ನೀಡಿದ ನೋಟೀಸನ್ನು ನಿಪಿ-2 ಎಂದು ನನ್ನ ಸಹಿಯನ್ನು ನಿಪಿ-2(ಎ) ಮತ್ತು ನಿಪಿ-3 ಎಂದು ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ನಂತರ ಚಾಸಾ5 ರಿಂದ 11 ರವರನ್ನು ನನ್ನ ಜೊತೆ ಮಾಡಿಕೊಂಡು ಚಾಸಾ2 ರವರಿಗೆ ಧಾಳಿ ಪೂರ್ವ ಶೋಧನಾ ಮಹಜರನ್ನು ಮಾಡುವಂತೆ ಕೇಳಿಕೊಂಡಿದ್ದು, ಅವರು ಚಾಸಾ3 ಮತ್ತು 4 ರವರ ಸಮಕ್ಷಮದಲ್ಲಿ ಪೋಲೀಸ್ ಅಧಿಕಾರಿಗಳ ಮತ್ತು ಪೋಲೀಸ್ ವಾಹನಗಳ ಶೋಧನಾ ವಾರೆಂಟನ್ನು ಸಂಜೆ 4-15 ರಿಂದ 4-45 ರವರೆಗೆ ನಡೆಸಿರುತ್ತಾರೆ. ಈ ಸಮಯ ಛಾಯಾಚಿತ್ರವನ್ನು ತೆಗೆಯಲಾಗಿರುತ್ತದೆ. ಧಾಳಿ ಪೂರ್ವ ಮಹಜರನ್ನು ನಿಪಿ-4 ಎಂದು ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಆ ಸಮಯ ತೆಗೆದ ಫೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು.

ನಂತರ ನಮ್ಮ ಸಿಬ್ಬಂದಿ, ಚಾಸಾ-2 ರಿಂದ 4 ರವರ ಜೊತೆ 2 ಇಲಾಖಾ ವಾಹನಗಳಲ್ಲಿ 4-50 ಗಂಟೆಗೆ ಠಾಣೆಯನ್ನು ಬಿಟ್ಟು 5-10 ಗಂಟೆಗೆ ಎಐಟಿ ಕಾಲೇಜ್ ಹತ್ತಿರ ಹೋಗಿರುತ್ತೇವೆ. ಹಾಸ್ಟೆಲ್ ಪಕ್ಕದಲ್ಲಿ ನಮ್ಮ ವಾಹನಗಳನ್ನು ನಿಲ್ಲಿಸಿ, ಮರೆಯಲ್ಲಿ ನಿಂತು ಬರುತ್ತಿರುವ ವಾಹನಗಳನ್ನು ಗಮನಿಸುತ್ತಿದ್ದೆವು. ಬಾಯ್ಸ್ ಹಾಸ್ಟೆಲ್ ನಿಂದ ಸುಮಾರು 100 ಮೀಟರ್ ದೂರದಲ್ಲಿ ಬೀಕನಹಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿ ಬೀಕನಹಳ್ಳಿ ಕಡೆಗೆ ಮುಖ ಮಾಡಿ ಒಂದು ಇಂಡಿಕಾ ಕಾರು ನಿಂತಿದ್ದು ಅದರ ಪಕ್ಕದಲ್ಲಿ 4 ಜನರು ನಿಂತುಕೊಂಡಿದದರು, ಅವರ ನಡವಳಿಕೆ ಸಂಶಯಾಸ್ಪದವಾಗಿ ಕಂಡು ಬಂದಿದ್ದು, ನಾವೆಲ್ಲರೂ ಸದರಿ ಸ್ಥಳದ ಕಡೆಗೆ ಧಾವಿಸಿದ್ದು, ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಆ 4 ಜನ ಓಡಿ ಹೋಗಿರುತ್ತಾರೆ. ನಮ್ಮ ಸಿಬ್ಬಂದಿ ಅದರಲ್ಲಿ ಒಬ್ಬ ವ್ಯಕ್ತಿಯನ್ನು ಹಿಡಿದು ನನ್ನ ಮತ್ತು ಚಾಸಾ2 ರವರ ಮುಂದೆ ಹಾಜರುಪಡಿಸಿರುತ್ತಾರೆ. ನಮ್ಮ ಮುಂದೆ ಹಾಜರುಪಡಿಸಿದ ವ್ಯಕ್ತಿಯ ಹೆಸರು ವಿಳಾಸ ಕೇಳಲಾಗಿ ಆತನು ತನ್ನ ಹೆಸರನ್ನು ಮುಬಾರಕ್ ಬಿನ್ ಬಾಬು, ಹಳೇಬೀಡು ಎಂದು ತಿಳಿಸಿರುತ್ತಾನೆ. ಆ ವ್ಯಕ್ತಿಯನ್ನು ವಿಚಾರಿಸಲಾಗಿ ಓಡಿಹೋದ ವ್ಯಕ್ತಿಗಳು ಸಾದಿಕ್ ಮತ್ತು ಪ್ರಶಾಂತ್ ಎಂದು ತಿಳಿಸಿರುತ್ತಾರೆ. ನಾನು ಸಾದಿಕ್ ನ ಕಾರು ಚಾಲಕನಾಗಿ ಆತನ ಕೋರಿಕೆಯ ಮೇರೆಗೆ ಬಂದಿರುತ್ತೇನೆ. ಮುಜಾಮಿಲ್ ಎನ್ನುವವನು ಸಾದಿಕ್ ನ ಮನೆಯಲ್ಲಿ ಎಲ್ಲಿಂದಲೋ ಗಾಂಜಾವನ್ನು ತಂದು ಇಟ್ಟಿದ್ದು, ಈ ದಿನ ಮಧ್ಯಾಹ್ನ 12-

00 ಗಂಟೆಗೆ ಆತನ ಮನೆಗೆ ಕರೆದು ಚಿಕ್ಕಮಗಳೂರು ಕಾಲೇಜಿನ ಹತ್ತಿರ ಹೋಗಿ ಇದನ್ನು ಮಾರಾಟ ಮಾಡಿ ಬರೋಣ ನೀನು ಕಾರು ಚಾಲಕನಾಗಿ ಬಾ ನಿನಗೆ ಹಣ ಕೊಡುತ್ತೇನೆ ಎಂದು ಹೇಳಿದ್ದು, ನಾನು ಹಣದ ಆಸೆಗೆ ಸಾದಿಕ್ ನೊಂದಿಗೆ ಕಾರು ಚಾಲಕನಾಗಿ ಬಂದಿರುತ್ತೇನೆ, ಹಳೇಬೀಡು ಸಾದಿಕ್ ನ ಮನೆಯಲ್ಲಿದ್ದ ಗಾಂಜಾವನ್ನು ಸಾದಿಕ್ ನ ತಾಯಿ ಬತ್ತುಲಮ್ಮ ಎಂಬುವವರು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ, ಮಾರಾಟ ಮಾಡಿಕೊಂಡು ಬನ್ನಿ ಎಂದು ತಿಳಿಸಿ, ನನಗೆ ಹೇಳಿ ಕಳಿಸಿರುತ್ತಾಳೆ, ನಾನು ಸಾದಿಕ್ ಮತ್ತು ಆತನ ಗೆಳೆಯರಾದ ಪ್ರಶಾಂತ್ ಮತ್ತು ಮುಜಾಮಿಲ್ ರವರು ಸಾದಿಕ್ ನ ಬಳಿ ಇದ್ದ ಕಾರಿನಲ್ಲಿ ಗಾಂಜಾ ಮಾರಾಟ ಮಾಡಲು ಚಿಕ್ಕಮಗಳೂರಿಗೆ ಬಂದಿರುತ್ತೇವೆ ಎಂದು ತಿಳಿಸಿರುತ್ತಾನೆ.

ನಿನ್ನನ್ನು ಮತ್ತು ಕಾರನ್ನು ಯಾರು ಶೋಧನೆ ಮಾಡಬೇಕು ಎಂದು ಲಿಖಿತವಾಗಿ ಮುಬಾರಕ್ ನಿಗೆ ನೋಟೀಸ್ ನೀಡಿ ಕೇಳಲಾಗಿ, ಆತನು ಲಿಖಿತವಾಗಿ ನನ್ನನ್ನು ಮತ್ತು ನನ್ನ ವಾಹನವನ್ನು ಗೆಜೆಟೆಡ್ ಅಧಿಕಾರಿಗಳು ತಪಾಸಣೆ ಮಾಡಬಹುದು ಎಂದು ತಿಳಿಸಿರುತ್ತಾನೆ. 4 ನೇ ಆರೋಪಿಗೆ ನೀಡಿದ ನೋಟೀಸನ್ನು ನಿಪಿ-6 ಎಂದು ನನ್ನ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿ 4 ನೇ ಆರೋಪಿಯು ತಪಾಸಣೆ ಮಾಡಲು ಅನುಮತಿಸಿದ ಬಗ್ಗೆ ಬರೆದು ಸಹಿ ಮಾಡಿರುತ್ತಾನೆ. 4 ನೇ ಆರೋಪಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಗಾಂಜಾ ಮಾರಾಟ ಮಾಡಲು ಅಧಿಕೃತ ಪರವಾನಗಿ ಇದೆಯೇ ಎಂದು ಕೇಳಲಾಗಿ ಆತನು ಇಲ್ಲ ಎಂದು ತಿಳಿಸಿರುತ್ತಾನೆ. ನಂತರ ಸದರಿ ಆರೋಪಿಯನ್ನು 5-20 ಗಂಟೆಗೆ ವಶಕ್ಕೆ ಪಡೆದುಕೊಂಡಿರುತ್ತೇವೆ. ನಂತರ ಚಾಸಾ2 ರವರು ಪೋಲೀಸರು ಮತ್ತು ಚಾಸಾ3 ಮತ್ತು 4 ರವರ ಸಮಕ್ಷಮ ಆರೋಪಿಯ ಅಂಗಶೋಧನೆ ಮತ್ತು ಕೆಎ-18/ಪಿ-5155 ನಂಬರಿನ ಕಾರಿನ ತಪಾಸಣೆ ಮಾಡಿರುತ್ತಾರೆ. ಸದರಿ ಕಾರಿನ ಹಿಂಭಾಗದ ಸೀಟಿನಲ್ಲಿ 2 ಪ್ಲಾಸ್ಟಿಕ್ ಬ್ಯಾಗುಗಳಿದ್ದು ಸದರಿ ಬ್ಯಾಗಿನ ಒಳಗೆ ನೋಡಲಾಗಿ, ಅವುಗಳಲ್ಲಿ ಕಾಂಡ, ಹೂವು, ಹಣ್ಣು, ಬೀಜ, ಒಣಗಿದ ಎಲೆಗಳಿಂದ ಕೂಡಿದ ಗಾಂಜಾ ಇರುವುದು ಕಂಡು ಬಂದಿರುತ್ತದೆ. ಠಾಣೆಯಿಂದ ತೆಗೆದುಕೊಂಡು ಹೋಗಿದ್ದ ತೂಕದ ಯಂತ್ರದಿಂದ ಸದರಿ ಗಾಂಜಾವನ್ನು ಚಾಸಾ-2 ರವರು ತೂಕ ಮಾಡಿರುತ್ತಾರೆ.

ಒಂದು ಪ್ಯಾಕೆಟ್ ನಲ್ಲಿ 390 ಗ್ರಾಂ, ಇನ್ನೊಂದು ಪ್ಯಾಕೆಟ್ ನಲ್ಲಿ 330 ಗ್ರಾಂ, ಒಟ್ಟು 720 ಗ್ರಾಂ ಗಾಂಜಾ ಇರುವುದು ಕಂಡು ಬಂದಿರುತ್ತದೆ. ನಂತರ ಗಾಂಜಾ ಮತ್ತು ಸದರಿ ಕಾರನ್ನು 5-20 ರಿಂದ 6-30 ರವರೆಗೆ ಮಹಜರ್ ಮಾಡಿ, ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ. ಆ ಸಮಯ

ಛಾಯಾಚಿತ್ರಗಳನ್ನು ತೆಗೆಯಲಾಗಿರುತ್ತದೆ. ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ-7 ಎಂದು ನನ್ನ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಫೋಟೋಗಳನ್ನು ನಿಪಿ8 ಮತ್ತು 9 ಎಂದು ಗುರುತಿಸಲಾಯಿತು. ನಂತರ ನಾನು ಆರೋಪಿ ಮುಬಾರಕ್, ವಶಕ್ಕೆ ಪಡೆದ ಕಾರು ಮತ್ತು ಗಾಂಜಾದೊಂದಿಗೆ 6-50 ಗಂಟೆಗೆ ನಗರ ಠಾಣೆಗೆ ಬಂದಿರುತ್ತೇನೆ. 7-30 ರವರೆಗೆ ಸ್ವಪಿರ್ಯಾದನ್ನು ತಯಾರಿಸಿ, ಆರೋಪಿತರ ವಿರುದ್ಧ ಕ್ರಮ ಕೈಗೊಳ್ಳುವಂತೆ, ನನ್ನ ವರದಿಯೊಂದಿಗೆ ನಾನು ವಶಪಡಿಸಿಕೊಂಡ ಕಾರು, ಗಾಂಜಾ ಮತ್ತು 4 ನೇ ಆರೋಪಿಯನ್ನು ಠಾಣಾಧಿಕಾರಿಗೆ ನೀಡಿರುತ್ತೇನೆ.

ನಾನು ನೀಡಿದ ವರದಿಯನ್ನು ನೋಡುತ್ತಿದ್ದು, ಅದನ್ನು ಈ ದಿನ ನಿಪಿ-10 ಎಂದು ನನ್ನ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ವರದಿ ತಯಾರಿಸುವಾಗ ವರದಿಯ ಮೊದಲನೇ ಪುಟದಲ್ಲಿ ದಿನಾಂಕ 16 ರ ಬದಲು 15 ಎಂದು ಕಣ್ತಪ್ಪಿನಿಂದ ನಮೂದಾಗಿರುತ್ತದೆ. ಆದರೆ, 4 ನೇ ಪುಟದಲ್ಲಿ ದಿನಾಂಕವನ್ನು ಸರಿಯಾಗಿ ಬರೆಯಲಾಗಿದೆ. ನಿಪಿ-8 ಮತ್ತು 9 ರಲ್ಲಿ ನಾನು ವಶಪಡಿಸಿಕೊಂಡ ಕಾರು ಮತ್ತು ಗಾಂಜಾ ಇರುತ್ತದೆ. ಆ ದಿನ ಓಡಿ ಹೋದ 3 ಜನರಲ್ಲಿ ಇಬ್ಬರು ಆರೋಪಿತರು ನ್ಯಾಯಾಲಯದ ಮುಂದೆ ಇರುತ್ತಾರೆ. 4 ನೇ ಆರೋಪಿಯನ್ನು ಮತ್ತು ಇನ್ನೊಬ್ಬ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ನ್ಯಾಯಾಲಯದ ಅವಧಿ ಮುಗಿದ ಕಾರಣ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿಜೆಎಂ., ಚಿಕ್ಕಮಗಳೂರು.